UASB LIBRARY

Newspaper Clippings

11 ರೈಲುಗಳಲ್ಲಿ 2,750 ಟನ್ ಮಾವು ಸಾಗಾಟ | 'ಆಪರೇಷನ್ ಗ್ರೀನ್' ಅಡಿ ಸಾಗಣೆ ವೆಚ್ಚದಲ್ಲಿ ಶೇ.50 ಸಬ್ಸಿಡಿ

ರೈತರಿಗೆ ವರದಾನವಾದ ಕಿಸಾನ್ ರೈಲು

ವೆಂ.ಸುನೀಲ್ ಕುಮಾರ್ ಕೋಲಾರ
sunilkumarpapuu@gmail.com

ಕೊರೊನಾ ಸಂಕಷ್ಟದ ನಡುವೆ ಕೇಂದ್ರ ಸರಕಾರ ಆರಂಭಿಸಿದ್ದ 'ಕಿಸಾನ್ ರೈಲು' ರೈತರಿಗೆ ವರದಾನವಾಗಿದೆ. ಕಡಿಮೆ ವೆಚ್ಚದಲ್ಲಿ ದೇಶದ ಇತರೆಡೆಗೆ ತಮ್ಮ ಉತ್ಪನ್ನಗಳನ್ನು ರವಾನಿಸಲು ಸಹಕಾರಿಯಾಗಿದೆ.

ಕೊರೊನಾದಿಂದಾಗಿ ಮಾರುಕಟ್ಟೆ ದೊರೆಯದ್ದರಿಂದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಮಾವು ಬೆಳೆಗಾರರು ಸೂಕ್ತ ಬೆಲೆ ಸಿಗದೆ ತೊಂದರೆ ಅನುಭವಿಸಿದರು. ಆ ಹಿನ್ನೆಲೆಯಲ್ಲಿ ರೈತರು ಬೆಳೆದ ಉತ್ಪನ್ನಗಳನ್ನು ಬೇರೆ ಕಡೆಗೆ ಸಾಗಣೆ ಮಾಡಲು ಕಿಸಾನ್ ರೈಲು ಸೇವೆಯನ್ನು ಸರಕಾರ ಆರಂಭಿಸಿತು. ಇದರಿಂದ ಮಾವಿಗೆ ದಿಲ್ಲಿಯಲ್ಲಿ ಉತ್ತಮ ದರ ಸಿಕ್ಕಿರುವುದು ಒಂದೆಡೆಯಾದರೆ, ಸಾಗಾಣಿಕೆ ವೆಚ್ಚ ಶೇ.50ರಷ್ಟು ರೈತರಿಗೆ ಉಳಿತಾಯವಾಗಿದೆ.

ಚಿಂತಾಮಣಿಯಿಂದ ದಿಲ್ಲಿಯ ಆದರ್ಶನಗರಕ್ಕೆ ಸಂಚಾರ ಮಾಡಿದ ಮೊದಲ ಕಿಸಾನ್ ರೈಲಿನಲ್ಲಿ 250 ಟನ್ ಮಾವು ಸಾಗಣೆಯಾಗಿತ್ತು. ಇದರಿಂದ ಉತ್ತೇಜನಗೊಂಡಿರುವ ರೈತರು ಹಾಗೂ ರೈತ ಉತ್ಪಾದಕ ಸಂಘಗಳು(ಎಫ್‌ಪಿಒ) ಹೆಚ್ಚಿನ ಪ್ರಮಾಣದ ಮಾವನ್ನು ಉತ್ತರ ಭಾರತಕ್ಕೆ ಸಾಗಾಟಕ್ಕೆ ಮುಂದಾಗಿದ್ದಾರೆ. ಈವರೆಗೆ 250 ಟನ್ ತೂಕದ ಮಾವಿನ ಹಣ್ಣುಗಳನ್ನು ಹೊತ್ತ 11 ರೈಲುಗಳು ದಿಲ್ಲಿಗೆ ಹೋಗಿವೆ. ಒಟ್ಟು 2,750 ಟನ್ ಮಾವು ರವಾನೆಯಾದಂತಾಗಿದೆ.

ಚಿಂತಾಮಣಿಯಿಂದ ದೆಹಲಿಗೆ ಹೊರಟ ಮಾವಿನ ಕಾಯಿಗಳನ್ನು ತುಂಬಿದ ಕಿಸಾನ್ ರೈಲು.

> **ರೈತರ ಉತ್ಪನ್ನಗಳನ್ನು ಸಾಗಣೆ ಮಾಡುವ ಉದ್ದೇಶದಿಂದ ಆಪರೇಷನ್ ಗ್ರೀನ್ ಅಡಿಯಲ್ಲಿ ಶೇ.50ರಷ್ಟು ಸಬ್ಸಿಡಿ ನೀಡಲಾಗುತ್ತಿದ್ದು, ಚಿಂತಾಮಣಿಯಿಂದ ದಿಲ್ಲಿಗೆ ಹೋಗುತ್ತಿರುವ ರೈತರ ಹಣ್ಣುಗಳಿಗೆ ಉತ್ತಮ ದರ ಸಿಕ್ಕಿದೆ.**
> **-ಡಾ.ಎ.ಎನ್.ಕೃಷ್ಣಾರೆಡ್ಡಿ** ಹಿರಿಯ ವಿಭಾಗೀಯ ವಾಣಿಜ್ಯ ಪ್ರಬಂಧಕರು, ನೈರುತ್ಯ ರೈಲ್ವೆ, ಬೆಂಗಳೂರು
>
> **ಕೇಂದ್ರ ಸರಕಾರದಿಂದ ಸಾಗಣೆ ಹಾಗೂ ಕೋಲ್ಡ್‌ಸ್ಟೋರೇಜ್ ಸೌಲಭ್ಯ ಪಡೆಯಲು ಸಬ್ಸಿಡಿ ದೊರೆಯುತ್ತದೆ.**
> **-ಗಾಯಿತ್ರಿ**, ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ

ಹಲವು ಅನುಕೂಲ: ಸಾಮಾನ್ಯವಾಗಿ ಕೋಲಾರದಿಂದ ಟ್ರಕ್ ಮೂಲಕ ದಿಲ್ಲಿಗೆ 10 ಟನ್ ತೂಕದ ಕೃಷಿ ಉತ್ಪನ್ನ ಸಾಗಣೆಗೆ 1.10 ಲಕ್ಷ ರೂ.ವೆಚ್ಚವಾಗುತ್ತದೆ. ಆದರೆ, ಕಿಸಾನ್ ರೈಲಿನಲ್ಲಿ 56 ಸಾವಿರ ರೂ. ಆಗುತ್ತದೆ. ಇದರೊಂದಿಗೆ ಶೇ.50ರಷ್ಟು ಸಬ್ಸಿಡಿ ದೊರೆಯುವುದರಿಂದ ರೈತರು 28 ಸಾವಿರ ರೂ. ಮಾತ್ರ ಪಾವತಿಸಬೇಕಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ರೈಲ್ವೆ ಇಲಾಖೆಯು ರೈತರ ಬೆಳೆಗಳಿಗೆ ಪ್ರತಿ ಕೆ.ಜಿಗೆ 5.60 ರೂ.ಗಳನ್ನು ಸಾಗಣೆ ವೆಚ್ಚವಾಗಿ ಪಡೆಯುತ್ತದೆ. ಆಪರೇಷನ್ ಗ್ರೀನ್ಸ್ ಯೋಜನೆಯಡಿಯಲ್ಲಿ ಶೇ.50ರಷ್ಟು ಸಬ್ಸಿಡಿ ದೊರೆಯುವುದರಿಂದ ಪ್ರತಿ ಕೆ.ಜಿಗೆ 2.80 ರೂ. ಮಾತ್ರ ರೈತರು ಪಾವತಿಸಬೇಕಾಗುತ್ತದೆ. ರೈಲು ಮೂಲಕ ಹೋಗುವಂತಹ ರೈತರ ಉತ್ಪನ್ನಗಳು ಕೇವಲ 38-40 ಗಂಟೆಗಳಲ್ಲಿ ಚಿಂತಾಮಣಿಯಿಂದ ದಿಲ್ಲಿಗೆ ತಲುಪುತ್ತವೆ. ಇದರಿಂದಾಗಿ ರೈತರ ಉತ್ಪನ್ನಗಳು ಸಹ ಗುಣಮಟ್ಟದಿಂದ ಕೂಡಿರುತ್ತವೆ.

ಆಪರೇಷನ್ ಗ್ರೀನ್: ಕೇಂದ್ರ ಸರಕಾರದ ಆಹಾರ ಸಂಸ್ಕರಣಾ ಕೈಗಾರಿಕೆಗಳ ಇಲಾಖೆಯ 'ಆಪರೇಷನ್ ಗ್ರೀನ್' ಅಡಿ ದೇಶದ ವಿವಿಧ ರಾಜ್ಯಗಳಿಗೆ ರೈತರು ಬೆಳೆದ ಉತ್ಪನ್ನಗಳನ್ನು ಸಾಗಣೆಗೆ ಅವಕಾಶ ಕಲ್ಪಿಸಿದ್ದು, ರಾಜ್ಯದ ಮಾವು ಬೆಳೆಗಾರರು ಇದರ ಲಾಭ ಪಡೆದಿದ್ದಾರೆ.

07-07-2021 Vk Pg 05

07-07-2021 Pv Pg 05

ಖಾಸಗಿ ಕಂಪನಿಯೊಂದಿಗೆ ಕೃಷಿ ವಿವಿ ಒಡಂಬಡಿಕೆ: ಗರಿಷ್ಠ 5 ವರ್ಷ ಬೆಳೆಸಲು ಅನುಮತಿ

25 ವರ್ಷದ ಬಳಿಕ ಬಣ್ಣದ ಹತ್ತಿಗೆ ಮಾರುಕಟ್ಟೆ

• ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: ಇಲ್ಲಿನ ಕೃಷಿ ವಿಶ್ವವಿದ್ಯಾಲಯ 1995ರಲ್ಲಿ ಅಭಿವೃದ್ಧಿಪಡಿಸಿದ್ದ ದೇಸಿ ತಳಿ ಬಣ್ಣದ ಹತ್ತಿಯು (ಡಿಡಿಸಿಸಿ-1) ಈಗ ವಾಣಿಜ್ಯ ಬಳಕೆಗೆ ಮುಕ್ತವಾಗಿದ್ದು, ಈ ಬಗ್ಗೆ ಖಾಸಗಿ ಕಂಪನಿ ಜೊತೆಗೆ ವಿಶ್ವವಿದ್ಯಾಲಯ ಒಪ್ಪಂದಕ್ಕೆ ಸಹಿ ಹಾಕಿದೆ.

ಕೃಷಿ ವಿಜ್ಞಾನಿ ಡಾ.ಬಿ.ಎಂ.ಖಾದಿ ಅವರು ಇಲ್ಲಿನ ಹೆಬ್ಬಳ್ಳಿ ಫಾರ್ಮ್‌ನಲ್ಲಿ 25 ವರ್ಷಗಳ ಹಿಂದೆ ಕಂದು ಬಣ್ಣದ ಹತ್ತಿ ತಳಿ ಅಭಿವೃದ್ಧಿಪಡಿಸಿದ್ದು, ವಿ.ವಿ ಇದನ್ನು 1999ರಲ್ಲಿ ಬಿಡುಗಡೆಮಾಡಿತ್ತು. ಈವರೆಗೆ ವಾಣಿಜ್ಯ ಬಳಕೆಗೆ ಮುಕ್ತವಾಗಿರಲಿಲ್ಲ.

ಈಗ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಮಾನ್ಯತೆ ಪಡೆದ ಅಗ್ರಿ ಇನ್ನೋವೇಟಿವ್ ಇಂಡಿಯಾ ಸಂಸ್ಥೆ ಜೊತೆಗೆ ಬೆಂಗಳೂರಿನ ರಿಜಿಸ್ಟ್ರೀ ಆಫ್ ಸ್ಯಾರೀಸ್ ಸಂಸ್ಥೆ ಬಣ್ಣದ ಹತ್ತಿ ಬೆಳೆಯಲು ಒಪ್ಪಂದ ಮಾಡಿಕೊಂಡಿದೆ.

ಮುಖ್ಯಾಂಶಗಳು

- **1995ರಲ್ಲಿ ಡಾ. ಬಿ.ಎಂ.ಖಾದಿ ಅಭಿವೃದ್ಧಿಪಡಿಸಿದ್ದ ತಳಿ**
- **ಕಂದು ಬಣ್ಣದ ಡಿಡಿಸಿಸಿ-1 ತಳಿಯಿಂದ 1.3ಪಟ್ಟು ಹೆಚ್ಚು ಇಳುವರಿ**
- **ಐದು ವರ್ಷದ ಅವಧಿಗೆ 25ಕೆ.ಜಿ. ಬೀಜ ಬಳಕೆಗೆ ₹3 ಲಕ್ಷ**

ಒಡಂಬಡಿಕೆಯನ್ವಯ ₹3 ಲಕ್ಷಕ್ಕೆ 25 ಕೆ.ಜಿ. ಬೀಜವನ್ನು ಬಳಸಿ ಗರಿಷ್ಠ ಐದು ವರ್ಷ ಬೆಳೆಸಲು ವಿಶ್ವವಿದ್ಯಾಲಯ ಅನುಮತಿ ನೀಡಿದೆ. ಒಟ್ಟು ಇಳುವರಿಯಲ್ಲಿ ಮುಂದಿನ ವರ್ಷಕ್ಕೆ ಅಗತ್ಯವುಳ್ಳ ಬೀಜವನ್ನು ಇಟ್ಟುಕೊಂಡು, ಉಳಿದದ್ದನ್ನು ವಿ.ವಿಗೆ ಮರಳಿಸಬೇಕು, ಇಲ್ಲವೇ ನಾಶಪಡಿಸಬೇಕು ಎಂದು ಕರಾರು ವಿಧಿಸಿದೆ.



ಧಾರವಾಡ ಕೃಷಿ ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸಿ ವಾಣಿಜ್ಯ ಬಳಕೆಗೆ ಮುಕ್ತಗೊಳಿಸಿರುವ ಡಿಡಿಸಿಸಿ-1 ಕಂದು ಬಣ್ಣದ ಹತ್ತಿ

ಈ ಕುರಿತು ಮಾಹಿತಿ ನೀಡಿದ ವಿವಿಯ ಸಂಶೋಧನಾ ನಿರ್ದೇಶಕ ಡಾ. ಪಿ.ಎಲ್.ಪಾಟೀಲ, 'ಬಣ್ಣದ ಹತ್ತಿಯನ್ನು ವಿಶ್ವವಿದ್ಯಾಲಯದ ತಜ್ಞರ ಮೇಲ್ವಿಚಾರಣೆಯಲ್ಲೇ ಬೆಳೆಸಬೇಕು. ಇದನ್ನು ಬೆಳೆಯುವ 100 ಮೀಟರ್ ಅಂತರದಲ್ಲಿ ಬಿಳಿ ಹತ್ತಿ ಇರುವಂತಿಲ್ಲ. ಬೆಳೆದ ಹತ್ತಿಯನ್ನು ವಾಣಿಜ್ಯವಾಗಿ ಬಳಸಬಹುದು. ಒಟ್ಟು ಲಾಭಾಂಶದಲ್ಲಿ ವಿ.ವಿಗೆ ಶೇ 70ರಷ್ಟು, ಅಗ್ರಿ ಇನ್ನೋವೇಟಿವ್ ಇಂಡಿಯಾಗೆ ಶೇ 20ರಷ್ಟು ಮತ್ತು ಐಸಿಎಆರ್‌ಗೆ ಶೇ 10ರಷ್ಟು ಹಂಚಿಕೆಯಾಗಲಿದೆ' ಎಂದರು.

'ದಕ್ಷಿಣ ಭಾರತದಲ್ಲಿ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡುನಲ್ಲಿ ಕಪ್ಪು ಎರೆ ಮಣ್ಣಿನ ಜಮೀನು ಮುಂಗಾರಿನಲ್ಲಿ ಡಿಡಿಸಿಸಿ-1 ಬೆಳೆಯಲು ಸೂಕ್ತ. ಬಿಳಿ ಹತ್ತಿ ತಳಿಗೆ ಹೋಲಿಸಿದಲ್ಲಿ ಇದು 1.3ಪಟ್ಟು ಇಳುವರಿ ಅಧಿಕ ಮತ್ತು ಕೀಟ, ರೋಗ ನಿರೋಧಕ ಗುಣವನ್ನು ಹೊಂದಿದೆ. ರಿಜಿಸ್ಟ್ರೀ ಆಫ್ ಸ್ಯಾರೀಸ್ ಸಂಸ್ಥೆ ಸದ್ಯ ಇದನ್ನು ಬೆಂಗಳೂರು ಭಾಗದಲ್ಲಿ ಬೆಳೆಯಲಿದೆ' ಎಂದು ಹತ್ತಿ ವಿಭಾಗದ ಹಿರಿಯ ವಿಜ್ಞಾನಿ ಡಾ. ರಾಜೇಶ್ ಎಸ್. ಪಾಟೀಲ ವಿವರಿಸಿದರು.

"Never wait. Life goes faster than you think"

ಕಿಸಾನ್ ರೈಲಿನ ಮೂಲಕ ಟೊಮೇಟೊ ಸಾಗಾಟಕ್ಕೆ ಸಿದ್ಧತೆ

ಬೆಂಗಳೂರು: ತಾವು ಬೆಳೆದಿದ್ದ ಟೊಮೇಟೊ ಬೆಳೆಗೆ ಸೂಕ್ತ ಬೆಲೆ ಸಿಗದೇ ಕಂಗಾಲಾಗಿದ್ದ ರಾಜ್ಯದ ಬೆಳೆಗಾರರ ಬೆಳೆಯನ್ನು ನವದೆಹಲಿ ಮತ್ತು ಪಶ್ಚಿಮ ಬಂಗಾಳಕ್ಕೆ ಪೂರೈಕೆ ಮಾಡಲು ಪೂರಕ ಸಿದ್ಧತೆ ನಡೆಯುತ್ತಿದೆ.

- ರಾಜ್ಯದಿಂದ ಪಶ್ಚಿಮ ಬಂಗಾಳ, ನವದೆಹಲಿಗೆ ಹಣ್ಣು
- ಪ್ರಾಯೋಗಿಕ ರವಾನೆ ಕಾರ್ಯ ಯಶಸ್ವಿ
- ರೈತರಿಗೆ ಉತ್ತಮ ಬೆಲೆ ದೊರೆಯುವ ಭರವಸೆ

ಭಾರತೀಯ ರೈಲ್ವೆಯ ಕಿಸಾನ್ ರೈಲಿನ ಮೂಲಕ ಕೋಲಾರ - ಚಿಕ್ಕಬಳ್ಳಾಪುರದಿಂದ ಟೊಮೇಟೊ ಹಣ್ಣುಗಳನ್ನು ನವದೆಹಲಿ, ಪಶ್ಚಿಮ ಬಂಗಾಳಗಳಿಗೆ ರವಾನಿಸಲಿದೆ.

ಬೆಂಗಳೂರು ರೈಲ್ವೆಯು ಮೊದಲ ಬಾರಿಗೆ ಪಶ್ಚಿಮ ಬಂಗಾಳ ಮತ್ತು ನವದೆಹಲಿ ಎಕ್ಸ್‌ಪ್ರೆಸ್ ರೈಲುಗಳ ಮೂಲಕ ಟೊಮೇಟೊ ರವಾನೆ ಮಾಡಲಿದೆ. ಈಗಾಗಲೇ ಕಿಸಾನ್ ರೈಲುಗಳ ಪ್ರಾಯೋಗಿಕ ಸೇವೆಗಳ ಮೂಲಕ ಯಶಸ್ಸು ಪಡೆದಿರುವ ರೈಲ್ವೆ ಇದೀಗ ಟೊಮೇಟೊ ಬೆಳೆಗಾರರ ಸಂಕಷ್ಟಕ್ಕೆ ಹೆಗಲು ನೀಡಲು ಮುಂದೆ ಬಂದಿದೆ. ಈ ಸಂಬಂಧ ಈಗಾಗಲೇ ಬೆಳೆಗಾರರು, ವ್ಯಾಪಾರಸ್ಥರ ಜತೆಗೂ ರೈಲ್ವೆ ವಿಭಾಗದ ಅಧಿಕಾರಿಗಳು ಮಾತನಾಡಿರುವುದಾಗಿ ತಿಳಿಸಿದ್ದಾರೆ.

ರೈತರಿಗೆ ಉತ್ತಮ ಬೆಲೆ: ಪಶ್ಚಿಮ ಬಂಗಾಳ ಮತ್ತು ನವದೆಹಲಿ ಮಾರುಕಟ್ಟೆಗಳಲ್ಲಿ ಟೊಮೇಟೊ ಕೊರತೆ ಇದ್ದು, ಈ ಹಿನ್ನೆಲೆಯಲ್ಲಿ ರವಾನಿಸಲಾಗುತ್ತಿದೆ. ಇದರಿಂದ ಇಲ್ಲಿನ ರೈತರಿಗೆ ಉತ್ತಮ ಬೆಲೆ ದೊರೆಯುವುದೂ ಸಾಧ್ಯ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ಕೆಲವೇ ದಿನಗಳ ಹಿಂದೆ ತಮ್ಮ ಬೆಳೆಗಳನ್ನು ರೈತರು ಸೂಕ್ತ ಬೆಲೆ ಸಿಗದೇ ರಸ್ತೆಗೆ ಎಸೆದು ಹೋಗಿರುವುದನ್ನು ನಾವು ನೋಡಿದ್ದೇವೆ. ಈ ಪ್ರಕರಣ ಹಸಿರಾಗಿರುವಂತೆಯೇ ಇತ್ತ ಸಂಕಷ್ಟದಲ್ಲಿರುವ ರೈತರಿಗೆ ಭಾರತೀಯ ರೈಲ್ವೆ ನೆರವಿಗೆ ಧಾವಿಸಿದ್ದು, ಕೋಲಾರ-ಚಿಕ್ಕಬಳ್ಳಾಪುರದಿಂದ ದೆಹಲಿಗೆ ಬೆಳೆಗಳನ್ನು ಹೊತ್ತು ಸಾಗಿದೆ. ಈಗಾಗಲೇ ಇಲಾಖೆ ಪ್ರಾಯೋಗಿಕ ರವಾನೆ ಕಾರ್ಯ ಮಾಡಿದ್ದು, ಅದು ಯಶಸ್ವಿಯಾಗಿದೆ.

ಬೆಳೆ ಹಾನಿಯಾಗಿಲ್ಲ

ಹೌರಾ ರೈಲ್ವೆ ನಿಲ್ದಾಣಕ್ಕೆ 4 ಟನ್ ಟೊಮೆಟೊ ಸಾಗಿಸುವ ಪ್ರಯೋಗ ನಡೆಸಿದ ನಂತರ, ಪ್ರತಿಕ್ರಿಯೆ ಉತ್ತಮವಾಗಿದೆ. ರವಾನೆ ವೇಳೆ ಬೆಳೆ ಹಾನಿಗೊಳಗಾಗಲಿಲ್ಲ ಮತ್ತು ಟೊಮ್ಯಾಟೋ ಕೂಡ ತಾಜಾವಾಗಿತ್ತು. ನಮ್ಮ ಪ್ರತಿನಿಧಿಗಳು ಸೇವೆಯನ್ನು ಪ್ರಾರಂಭಿಸುವ ಬಗ್ಗೆ ರೈತರು ಮತ್ತು ವ್ಯಾಪಾರಿಗಳೊಂದಿಗೆ ಮಾತನಾಡಿದ್ದಾರೆ. ಇಲ್ಲಿ ಮಾರುಕಟ್ಟೆಯಲ್ಲಿ ಕೊರತೆಯಿದೆ ಮತ್ತು ದೆಹಲಿ ಮತ್ತು ಪಶ್ಚಿಮ ಬಂಗಾಳದಲ್ಲಿ ರೈತರಿಗೆ ಉತ್ತಮ ಬೆಲೆ ಪಡೆಯಲು ನಾವು ಸಹಾಯ ಮಾಡಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

For more information visit University Library Website
Web - uasbagrilibindia.org
E-mail- librarian@uasbangalore.edu.in